**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ**

ಸಿಸಿ.361/2016

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಪ್ರದೀಪ್ ಪೂಜಾರಿ | ಸಿಡಬ್ಲ್ಯೂಃ **08** |
| ತಂದೆ/ಗಂಡನ ಹೆಸರು | ಃ | ಬಾಲಕೃಷ್ಣ ಪೂಜಾರಿ | ಪಿಡಬ್ಲ್ಯೂಃ **02** |
| ವಯಸ್ಸು | ಃ | 38 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ಪೋಲೀಸ್ ಇನ್ಸ್‌ಪೆಕ್ಟರ್, ಲೋಕಾಯುಕ್ತ, ಕೋಲಾರ. | 27.02.2026 |
| ವಾಸ ಸ್ಥಳ | ಃ | ದೇವನಹಳ್ಳಿ | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನಾನು ಜೂನ್-**2015** ರಿಂದ ಜುಲೈ-**2018** ರವರೆಗೆ ನಾನು ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

**2.** ದಿಃ**21.01.2016** ರಂದು ಚಾ.ಸಾ.**7** ರವರಿಂದ ಈ ಪ್ರಕರಣದ ಕಡತ ಪಡೆದು ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ. ದಿಃ**25.01.2016** ರಂದು ಚಾ.ಸಾ.**1** ರವರ ಮರು ಹೇಳಿಕೆ ದಾಖಲಿಸಿಕೊಂಡಿದ್ದೇನೆ. ನಂತರ ಚಾ.ಸಾ.**2** ಮತ್ತು **3** ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ಆರೋಪಿ ಪತ್ತೆಗೆ ಚಾ.ಸಾ.**6** ರವರನ್ನು ನೇಮಕ ಮಾಡಿರುತ್ತೇನೆ. ದಿಃ**28.01.2016** ರಂದು ಚಾ.ಸಾ.**6** ರವರು ಆರೋಪಿಯನ್ನು ವಶಕ್ಕೆ ಪಡೆದು ಮಧ್ಯಾಹ್ನ **03** ಗಂಟೆಗೆ ಹಾಜರು ಪಡಿಸಿರುತ್ತಾರೆ. ನಂತರ ಅಗತ್ಯ ಕಾನೂನು ಕ್ರಮ ಜರುಗಿಸಿ ಆರೋಪಿಯ ಸ್ವಇಚ್ಛಾ ಹೇಳಿಕೆ ದಾಖಲಿಸಿಕೊಂಡು ಬಿಡುಗಡೆ ಮಾಡಿಕೊಂಡಿರುತ್ತೇನೆ. ಸ್ವ-ಇಚ್ಛಾ ಹೇಳಿಕೆಯಲ್ಲಿ ನನ್ನ ಸಹಿ ಇದ್ದು ಸ್ವ-ಇಚ್ಛಾ ಹೇಳಿಕೆಯನ್ನು ನಿ.ಪಿ.**3** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.**3**(ಎ) ಎಂದು ಗುರುತಿಸಲಾಯಿತು. ನಂತರ ಕೃತ್ಯ ನಡೆದ ಸ್ಥಳದ ಪಹಣಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಪಹಣಿಯಲ್ಲಿ ನನ್ನ ಸಹಿ ಇದ್ದು ಪಹಣಿಯನ್ನು ನಿ.ಪಿ.**4** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.**4**(ಎ) ಎಂದು ಗುರುತಿಸಲಾಯಿತು. ಈ ಹಂತದಲ್ಲಿ ತನಿಖೆ ಪೂರ್ಣಗೊಂಡಿದ್ದು, ಆರೋಪಿ ವಿರುದ್ಧ ಮೇಲ್ನೋಟಕ್ಕೆ ಆರೋಪ ಸಾಬೀತಾಗಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಆರೋಪಿ ವಿರುದ್ಧ ಸಲ್ಲಿಸಿರುತ್ತೇನೆ. ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತಾತರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ ಕೆ ವಿ ವಕೀಲರಿಂದಃ-

ಚಾ.ಸಾ.**1** ರವರ ಮರು ಹೇಳಿಕೆಯನ್ನು ನಾನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮರು ಹೇಳಿಕೆಯನ್ನು ದಿಃ**25.01.2015** ರಂದು ಪಡೆಯಲಾಗಿದೆ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಬೆರಳಚ್ಚು ತಪ್ಪಿನಿಂದ ತಪ್ಪಾಗಿದೆ ಎಂದು ನುಡಿದು ಸದರಿ ಮರು ಹೇಳಿಕೆಯನ್ನು ದಿಃ**25.01.2016** ರಂದು ಪಡೆದಿರುತ್ತೇನೆಂದು ನುಡಿಯುತ್ತಾರೆ. ನಾನು **30** ಮರಗಳನ್ನು ಕಟಾವು ಮಾಡಿದ ದಾಖಲೆಗಳನ್ನು ತನಿಖಾ ಕಾಲದಲ್ಲಿ ಪಡೆದುಕೊಂಡಿರುವುದಿಲ್ಲ. ನಿ.ಪಿ.**1** ನ್ನು ದಾಖಲಿಸಲು ಆಗಿರುವ ಕಾಲ ವಿಳಂಬದ ಬಗ್ಗೆ ತನಿಖೆ ಮಾಡಿರುವುದಿಲ್ಲ. ಚಾ.ಸಾ.**1** ರವರು ಹೇಳುವಂತೆ ಯಾವುದೇ ಘಟನೆ ಸಂಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚಾ.ಸಾ.**1** ರವರು ಹೇಳುವಂತೆ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಯಾವುದೇ ಮರಗಳನ್ನು ಕಟಾವು ಮಾಡಿಲ್ಲ ಎಂದರೆ ಸರಿಯಲ್ಲ. ಚಾ.ಸಾ.**1** ರವರ ಮಾತು ಕೇಳಿ, ಚಾ.ಸಾ.**1** ರವರಿಗೆ ಸಹಾಯ ಮಾಡಲು ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಆರೋಪಿ ವಿರುದ್ಧ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.